## 14. ಸರ್ಕಾರಿ ಎನ್.ಟಿ.ಎಂ.ಹೆಚ್. ಶಾಲೆ, ವಿನೋಬಾ ನಗರ

ಸಹ್ಯಾದ್ರಿ ಪರ್ವತಗಳ ಹಚ್ಚ ಹಸುರಿನ ವನರಾಶಿಯಿಂದ ತುಂಬಿ ತುಳುಕುವ ಮಲೆನಾಡೇ ಒಂದು ಸುಂದರ ದೃಶ್ಯಕಾವ್ಯ. ಜೀವ ವೈವಿಧ್ಯಗಳ ಆಗರವನ್ನೇ ತನ್ನ ಒಡಲೊಳಗೆ ಧರಿಸಿ, ಶಕ್ತಿಗಂಗೆ ಶರಾವತಿ ಹರಿಯುವ ಮಲೆನಾಡೇ ಸುಂದರ . . . . .ಅದ್ಭುತ.

ಅದ್ಭುತದಲ್ಲಿ ಅದ್ಭುತವಾದ "ಶರಾವತಿ ಕಣಿವೆ ಜಲವಿದ್ಯುತ್ ಯೋಜನೆ"ಯಿಂದಾಗಿ ಮುಳುಗಡೆಯಾದ ಮಡೆನೂರು ಅಥವಾ ಹಿರೇಭಾಸ್ಕರ ಗ್ರಾಮದ ಸರ್ಕಾರಿ ಎನ್.ಟಿ.ಎಂ.ಹೆಚ್. ಶಾಲೆಯನ್ನು 1965ರ ಫೆಬ್ರುವರಿ 14ರಂದು ಸಾಗರದ ಪ್ರಸಿದ್ಧ ದಾನಿಗಳಾದ ಶ್ರೀ ಸಿದ್ಧಯ್ಯ ಬೆನ್ನೂರುಮಠ ಹಾಗೂ ಅವರ ಪತ್ನಿ ಶ್ರೀಮತಿ ಸರ್ವಮಂಗಳಮ್ಮ ಬೆನ್ನೂರುಮಠ ರವರ ಸಹಕಾರದಿಂದ ಸಾಗರದ ವಿನೋಬಾ ನಗರದಲ್ಲಿ ಕಟ್ಟಿಸಿದ ವ್ಯವಸ್ಥಿತ ಖಾಸಗಿ ಕಟ್ಟಡಕ್ಕೆ ಶಾಲೆಯು ಸ್ಥಳಾಂತರಿಸಲಾಯಿತು.

ಅಂದಿನಿಂದ ಇಂದಿನವರೆಗೂ "ವಿನೋಬ ವಿದ್ಯಾಸಂಸ್ಥೆ" ಎಂಬ ಖಾಸಗಿ ಸಂಸ್ಥೆಯು ಶಾಲಾ ಕಟ್ಟಡದ ಮಾಲೀಕತ್ವವನ್ನು ಹೊಂದಿದ್ದು ಸರ್ಕಾರವು ಸೂಕ್ತ ಬಾಡಿಗೆಯನ್ನು ಪ್ರತಿ ವರ್ಷ ಈ ಶಾಲೆಗೆ ಸಂದಾಯ ಮಾಡುತ್ತಾ ಸರ್ಕಾರಿ ಶಾಲೆಯನ್ನು ನಡೆಸಿಕೊಂಡು ಬರುತ್ತಿದೆ. ಹೀಗಾಗಿ ಸರ್ಕಾರದಿಂದ ಯಾವುದೇ ಪೀಠೋಪಕರಣಗಳಿಗಾಗಲೀ, ಕಾಮಗಾರಿಗಳಿಗಾಗಲೀ ವಿಶೇಷ ಅನುದಾನವು ಲಭ್ಯವಾಗುತ್ತಿಲ್ಲ ಎಂಬ ವಿಷಯವನ್ನು ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

### ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆಗಳು:–

"ಜೀವನ ಉತ್ತಮಗೊಳ್ಳುವುದು ಅವಕಾಶಗಳಿಂದಲ್ಲ,

ನಿರಂತರ ಪ್ರಯತ್ನ ಮತ್ತು ಬದಲಾವಣೆಗಳಿಂದ" ಅನಾಮಿಕ

ಸಾಗರ ಪಟ್ಟಣದ ಹೃದಯ ಭಾಗದಲ್ಲಿರುವ ಖಾಸಗಿ ಬಸ್‌ನಿಲ್ದಾಣದ ಕೂಗಳತೆ ದೂರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವಿನೋಬಾನಗರ, ಇಲ್ಲಿಗೆ ದಿನಾಂಕ: 21–01–2016 ರಂದು ನಾನು ಬಡ್ತಿ ಮುಖ್ಯ ಶಿಕ್ಷಕಿಯಾಗಿ ಕರ್ತವ್ಯದ ಮೇಲೆ ಹಾಜರಾದೆ. ಬರುವಾಗ ಈ ಶಾಲೆಯ ಬಗ್ಗೆ ಬಹಳಷ್ಟು ನಿರೀಕ್ಷೆಗಳೊಂದಿಗೆ ಬಂದಿದ್ದೆ. ಆದರೆ ಶಿಷ್ಟಾಚಾರದಂತೆ ಶಾಲೆಯ ಹಿರಿಯ ಶಿಕ್ಷಕಿಯರು ಶಾಲೆಯ ಸಹಶಿಕ್ಷಕರ, ವಿದ್ಯಾರ್ಥಿಗಳ ಹಾಗೂ ಸುತ್ತಮುತ್ತಲಿನ ಭೌತಿಕ ಪರಿಸರದ ಪರಿಚಯ ಮಾಡಿಕೊಟ್ಟರು. ನಾ ಹೊತ್ತು ತಂದ ನಿರೀಕ್ಷೆಗಳು ಹುಸಿಯಾಗಿದ್ದವು.

ಹಲವಾರು ವರ್ಷಗಳಿಂದ ಸುಣ್ಣಬಣ್ಣವನ್ನೇ ಕಾಣದೆ ನಿಂತಿದ್ದ ಶಾಲಾ ಕಟ್ಟಡ ಶಿಥಿಲವಾದ ಸ್ಥಿತಿಯಲ್ಲಿದ್ದ ಶಾಲಾ ಕೊಠಡಿಗಳು, ಮುರಿದು ಹೋದ ಕಿಟಕಿ ಬಾಗಿಲುಗಳು ಅನುಪಯುಕ್ತ ವಸ್ತುಗಳಿಂದ ಕೂಡಿದ್ದ ಉಗ್ರಾಣದಂತೆ ಕಾಣುತ್ತಿದ್ದ ಎರಡು ತರಗತಿ ಕೊಠಡಿಗಳು ಮೂಲಭೂತ ಸೌಕರ್ಯಗಳಾದ ನೀರು, ಕುಡಿಯುವ ನೀರು, ಶೌಚಾಲಯ ಮತ್ತು ಸುತ್ತಮುತ್ತಲಿನ ಪರಿಸರದ ಸ್ವಚ್ಛತೆಯನ್ನು ಒಮ್ಮೆ ಅವಲೋಕಿಸಿದಾಗ ಭಯ ಹುಟ್ಟಿದಂತು ಸತ್ಯ.

ಆದರೆ ಅಂದು ಕಂಡ ಒಂದು ಸಂತಸದ ವಿಷಯವೇನೆಂದರೆ, ನನ್ನ ಎಲ್ಲ ಸಹೋದ್ಯೋಗಿ ಮಿತ್ರರು ಉತ್ತಮ ಕ್ರಿಯಾಶೀಲ ಮಹಿಳೆಯರಾಗಿದ್ದು ನನ್ನ ಕನಸಿನ ಶಾಲೆಗೆ ಶೈಕ್ಷಣಿಕವಾಗಿ ಮತ್ತು ಭೌದ್ಧಿಕವಾಗಿ ಸಹಕರಿಸಬಹುದು ಎಂಬ ನನ್ನ ಅನಿಸಿಕೆ ಇಂದಿಗೂ ಉಳಿಸಿಕೊಂಡು ಬಂದಿದ್ದಾರೆನ್ನಲು ತುಂಬಾ ಹಮ್ಮೆಯಾಗುತ್ತಿದೆ.

ಈ ಅವ್ಯವಸ್ಥೆಗೆ ಮುಖ್ಯ ಕಾರಣ ಹುಡುಕಿದಾಗ, ಇದು ಖಾಸಗೀ ಕಟ್ಟಡವಾಗಿದ್ದು ಸರ್ಕಾರದಿಂದ ಮಾಲೀಕರಿಗೆ ಬಾಡಿಗೆ ಸಂದಾಯವಾಗುತ್ತಿದೆ. ಶಾಲಾ ವ್ಯವಸ್ಥೆಗೆ ಶಾಲಾನುದಾನ ಮತ್ತು ನಿರ್ವಹಣಾನುದಾನ ಬಿಟ್ಟರೆ ಬೇರಾವ ವಿಶೇಷ ಅನುದಾನವು ಲಭ್ಯವಾಗುತ್ತಿಲ್ಲ.

"ನಿಸ್ವಾರ್ಥ ಸೇವೆಯ ಒಬ್ಬ ನೌಕರ, ತನ್ನ ಮನೆಗಿಂತ ಕಾರ್ಯಕ್ಷೇತ್ರದಲ್ಲೇ ಹೆಚ್ಚಿನ ಸಮಯ ಕಳೆಯುತ್ತಾನೆ". ಈ ಮಾತಿನಂತೆ ನನ್ನ ಕಾರ್ಯಕ್ಷೇತ್ರವಾದ ನನ್ನ ಶಾಲೆಯನ್ನು ನನ್ನ ಕನಸಿನಂತೆ

ಸಜ್ಜುಗೊಳಿಸಬೇಕೆಂದು ಅಂದೇ ಪಣತೊಟ್ಟೆ. ಅದಕ್ಕೆ ಪೂರಕವಾಗಿ ಅಂದಿನ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಕಬಸೆ ಅಶೋಕಮೂರ್ತಿಯವರ ಸಹಕಾರವು ದಕ್ಕಿತು.

ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ದಿನಾಂಕ: 6–2–2016ರಂದು ಎಸ್.ಡಿ.ಎಂ.ಸಿ. ಸಮಿತಿ ಪೋಷಕ ವರ್ಗದವರು, ಶಾಲಾ ಹಿತೈಷಿಗಳು, ವಿನೋಬಾ ನಗರದ ಸಂಘ ಸಂಸ್ಥೆಗಳನ್ನೊಳಗೊಂಡ ಸಭೆಯನ್ನು ಆಯೋಜಿಸಲಾಯಿತು. ಸಭೆಯ ತೀರ್ಮಾನದಂತೆ ತುರ್ತಾಗಿ ಆಗಬೇಕಾದ ಮೂಲಭೂತ ಕಾರ್ಯಗಳ ಪಟ್ಟಿಯನ್ನು ಹಾಗೂ ನೀಡಬಹುದಾದಂತಹ ದಾನಿಗಳ ಪಟ್ಟಿಯನ್ನು ಸಿದ್ಧಪಡಿಸಲಾಯಿತು.

ಅಂತೆಯೇ ಸದರಿ ಏಪ್ರಿಲ್ ಮೇ ತಿಂಗಳ ಬೇಸಿಗೆ ರಜೆಯಲ್ಲಿ ಅಂದಿನ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀಯುತ ಅಶೋಕ ಮೂರ್ತಿ ಹಾಗೂ ಸಹೋದ್ಯೋಗಿಯರಾದ ಶ್ರೀಮತಿ ಶೈಲಜಾ ಡಿ.ಹೆಗಡೆ ಮತ್ತು ಶ್ರೀಮತಿ ಸುವರ್ಣ ಎಂ.ಹೆಗಡೆಯವರ ಸಹಕಾರದೊಂದಿಗೆ ದಾನಿಗಳಿಂದ ಒಟ್ಟು 3,52,423–00 ರೂ.ಗಳನ್ನು ಸಂಗ್ರಹಿಸಿ ಶಾಲಾ ಕೊಠಡಿಗಳ ದುರಸ್ತಿ, ಕಿಟಕಿ ಬಾಗಿಲುಗಳ ರಿಪೇರಿ ಹಾಗೂ ಶಾಲೆಗೆ ಸುಣ್ಣಬಣ್ಣವನ್ನು ಮಾಡಿಸಲಾಯಿತು. ಇಷ್ಟಲ್ಲದೆ ಹೊಸದಾಗಿ ಟೈಲ್ಸ್‌ಗಳನ್ನೊಳಗೊಂಡ ಒಂದು ಶೌಚಾಲಯ, ಮೂರು ಮೂತ್ರಾಲಯ ಹಾಗೂ ವಾಷ್‌ಬೇಸಿನ್‌ಗಳನ್ನು ನಿರ್ಮಾಣ ಮಾಡಲಾಯಿತು. ಈ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ. ಮಾಜೀ ಅಧ್ಯಕ್ಷರಾದ ಶ್ರೀಯುತ ಅಶೋಕ್ ಮೂರ್ತಿಯವರ ಕಾರ್ಯವನ್ನು ಸ್ಮರಿಸಲು ಇಚ್ಛಿಸುತ್ತೇನೆ. ಏಕೆಂದರೆ, ಸತತ ಮೂರು ತಿಂಗಳುಗಳ ಕಾಲ ನಿಸ್ವಾರ್ಥ ಮನಸ್ಸಿನಿಂದ ಶಾಲೆಯೇ ತನ್ನ ಮನೆಯೆಂದು ಭಾವಿಸಿ ಕೆಲಸದವರ ಜೊತೆ ತಾನೂ ಶ್ರಮಿಸಿ ಶಾಲಾ ಕಟ್ಟಡಕ್ಕೆ ಕ್ಯೂರಿಂಗ್ ಮಾಡುವುದರ ಮೂಲಕ ಇತರ ಶಾಲೆಗಳಿಗೆ ಮಾದರಿಯಾಗಿದ್ದಾರೆ. ಕೇವಲ ನಾಲ್ಕು ತಿಂಗಳಲ್ಲಿ ಸಂಪೂರ್ಣ ಶಾಲೆಯ ಚಿತ್ರಣವನ್ನು ಬದಲಿಸಿ ಹೊಸ ಶೈಕ್ಷಣಿಕ ವರ್ಷ 2016–17ನೇ ಸಾಲಿನ ಶಾಲಾ ಪ್ರಾರಂಭೋತ್ಸವವನ್ನು ಜೂನ್ ತಿಂಗಳ 10ನೇ ತಾರೀಖಿನಂದು ವಿದ್ಯಾದಿ ದೇವತೆಯಾದ ಸರಸ್ವತಿ ಪೂಜೆಯನ್ನು ಆಚರಿಸುವುದರ ಮೂಲಕ ವಿದ್ಯುಕ್ತವಾಗಿ ಚಾಲನೆ ಮಾಡಲಾಯಿತು.

ಇಲ್ಲಿಗೆ ಶಾಲೆಯ ಭೌತಿಕ ವ್ಯವಸ್ಥೆಯ ಒಂದು ಹಂತದ ಕಾಮಗಾರಿಗಳು ಮುಕ್ತಾಯವಾಗಿದ್ದು 2016–17ಕ್ಕೆ ಶ್ರೀಯುತ ವಿ.ಶಂಕರ್‌ರವರು ಎಸ್.ಡಿ.ಎಂ.ಸಿ.ಅಧ್ಯಕ್ಷರಾದರು. ಶಾಲಾ ವ್ಯವಸ್ಥೆ ಹಾಗೂ ಉತ್ಸಾಹಿಗಳ ಕೊರತೆಯಿಂದ ಎರಡು ವರ್ಷಗಳ ಹಿಂದೆಯೇ ನಡೆಯಬೇಕಿದ್ದ ಶಾಲಾ ಸುವರ್ಣ ಮಹೋತ್ಸವದ ಕಾರ್ಯಕ್ರಮವು ಶ್ರೀಯುತ ವಿ.ಶಂಕರ್‌ರವರ ಉತ್ಸಾಹ ಹಾಗೂ ಮಹದಾಸೆಯಂತೆ ದಿನಾಂಕ:25–03–2017ರಂದು ನಡೆಯಿತು. ಕಾರ್ಯಕ್ರಮವು ತುಂಬಾ ಅದ್ದೂರಿಯಾಗಿ ನಡೆದು ಯಾವ ಖಾಸಗಿ ಶಾಲೆಗೂ ಕಡಿಮೆಯಿಲ್ಲ ಎನ್ನುವುದನ್ನು ಸಾರುವಂತಿತ್ತು.

ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಸ್ಥಳೀಯ ಯುವಕ ಸಂಘ ಪೋಷಕರು, ದಾನಿಗಳು, ಹಿತೈಷಿಗಳು ಹಾಗೂ ಎಸ್.ಡಿ.ಎಂ.ಸಿ. ಸದಸ್ಯರನ್ನು ಒಗ್ಗೂಡಿಸಿ, ಶಾಲೆಯಲ್ಲಿ ಸೇವೆ ಸಲ್ಲಿಸಿದ ಶಿಕ್ಷಕರು ಹಾಗೂ ಸಾಧಕರಿಗೆ ಮಾಡಿದ ಸನ್ಮಾನ ಕಾರ್ಯಕ್ರಮ ಹಾಗೂ ಮಕ್ಕಳ ಸಾಂಸ್ಕೃತಿ ಕಾರ್ಯಕ್ರಮವು ಯಶಸ್ವಿಯಾಗಲು ಶ್ರೀಯುತ ವಿ.ಶಂಕರ್‌ರವರ ಸಿಂಹಪಾಲು ಶ್ಲಾಘನೀಯ. ಅಂತೆಯೇ ಈ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳು ಹಾಗೂ ದಾನಿಗಳು ವಸ್ತುರೂಪದಲ್ಲಿ, ಹಣದ ರೂಪದಲ್ಲಿ ಶಾಲಾ ಶೈಕ್ಷಣಿಕ ಪ್ರಗತಿಗೆ ದೇಣಿಗೆ ನೀಡಿರುವುದನ್ನು ಸ್ಮರಿಸುತ್ತೇನೆ.

ಶಾಲೆಯಲ್ಲಿ ಕುಡಿಯಲು ತೆರೆದ ಬಾವಿಯ ನೀರಿನ ವ್ಯವಸ್ಥೆಯಿದ್ದು ಫೆಬ್ರುವರಿ ತಿಂಗಳಿನಲ್ಲಿ ಬಾವಿಯ ನೀರು ಬತ್ತಿಹೋಗುವುದರಿಂದ ಅಕ್ಷರದಾಸೋಹ ಹಾಗೂ ಕುಡಿಯುವ ನೀರಿಗೆ ಪ್ರತಿವರ್ಷ ಸಂಕಷ್ಟವನ್ನು ಎದುರಿಸುತ್ತಿದ್ದೆವು. ಈ ಬಗ್ಗೆ ನಮ್ಮ ಭಾಗದ ನಗರಸಭಾ ಸದಸ್ಯರಾದ ಶ್ರೀಮತಿ ಸರಸ್ವತಮ್ಮನವರ ಗಮನಕ್ಕೆ ತಂದಾಗ 15,000ಲೀ ನೀರು ಹಿಡಿಯುವ ಸಾಮರ್ಥ್ಯದ ಸಂಪು, ಮೋಟಾರ್ ಹಾಗೂ ಸಿಂಟೆಕ್ಸ್ ವ್ಯವಸ್ಥೆಯನ್ನು ನಗರಸಭಾ ವತಿಯಿಂದ ಮಾಡಿಸಿರುವರು. ಇದರ ಉಪಯೋಗವನ್ನು ಮಕ್ಕಳು ಸದಾ ಪಡೆಯುತ್ತಿದ್ದು ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಇನ್ನೂ ಶೈಕ್ಷಣಿಕ ವಿಚಾರಕ್ಕೆ ಸಂಬಂಧಿಸಿದಂತೆ, ನಮ್ಮ ಶಾಲೆಯಲ್ಲಿ ಒಟ್ಟು 112 ಮಕ್ಕಳು ವ್ಯಾಸಂಗ ಮಾಡುತ್ತಿದ್ದು ಪ್ರತಿನಿತ್ಯ ಬೆಳಿಗ್ಗೆ 9–15ರಿಂದ ದೇಶಭಕ್ತಿ ಗೀತೆ, ಮಕ್ಕಳ ಗೀತೆಯನ್ನು ಧ್ವನಿವರ್ಧಕಗಳ

ಸಹಾಯದೊಂದಿಗೆ ಪ್ರಸಾರ ಮಾಡುವುದರ ಮೂಲಕ ಮಕ್ಕಳನ್ನು ಶಾಲೆಗೆ ಬರಮಾಡಿಕೊಳ್ಳಲಾಗುತ್ತಿದೆ. ನಂತರ 9–40ರಿಂದ 10ರವರೆಗೆ ಸ್ವಯಂ ಅಧ್ಯಯನ ಅವಧಿಯನ್ನು ನಿರ್ವಹಿಸಲಾಗುತ್ತಿದೆ. ಹಾಗೆಯೇ ಎಲ್ಲಾ ಮಕ್ಕಳಿಗೂ ಸರ್ಕಾರದಿಂದ ಒದಗಿಸಲಾಗುತ್ತಿರುವ ಎಲ್ಲಾ ಸೌಲಭ್ಯಗಳನ್ನು ಸಕಾಲದಲ್ಲಿ ವಿತರಿಸಲಾಗಿದೆ. 2012–13ರಿಂದ ಕನ್ನಡ ಮಾಧ್ಯಮದ ಜೊತೆ 6 ಮತ್ತು 7ನೇತರಗತಿ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿಯೂ ಬೋಧನೆ ಮಾಡಲಾಗುತ್ತಿದೆ ಹಾಗೂ ಪ್ರಸ್ತುತ ವರ್ಷದಿಂದ ಕಂಪ್ಯೂಟರ್ ಆಧಾರಿತ ಸ್ಮಾರ್ಟ್ ಕ್ಲಾಸನ್ನು ನಡೆಸಲಾಗುತ್ತಿದೆ. ನಮ್ಮ ಸಿಬ್ಬಂದಿ ವರ್ಗದವರು ನುರಿತ ಶಿಕ್ಷಕರಾಗಿದ್ದು ಹೆಚ್ಚಿನ ಶಿಕ್ಷಕರು ಉನ್ನತ ವ್ಯಾಸಂಗವನ್ನು ಪೂರೈಸಿದ್ದರಿಂದ ಮಕ್ಕಳಿಗೆ ನಿರ್ವಂಚನೆಯಿಂದ ಬೋಧನೆ ಮಾಡುವುದರಲ್ಲಿ ಶ್ರಮಿಸುತ್ತಿದ್ದಾರೆ. ಕಳೆದ CSAS ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದ್ದು ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಸಂಖ್ಯೆ ಅತೀ ಕಡಿಮೆಯಿರುತ್ತದೆ.

ಪಠ್ಯೇತರ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ಮಕ್ಕಳು ಎಲ್ಲಾ ವಿಷಯದಲ್ಲೂ ಮುಂದಿದ್ದು ಖಾಸಗಿ ಸಂಸ್ಥೆಯವರು ನಡೆಸುವ ಚಿತ್ರಕಲೆ, ಪ್ರಬಂಧ, ದೇಶಭಕ್ತಿಗೀತೆ ಇತ್ಯಾದಿ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿ ಶಾಲೆಗೆ ಕೀರ್ತಿ ತರಲು ಶ್ರಮಿಸಿದ್ದಾರೆ. ಹಾಗೂ ನಮ್ಮ ಶಾಲೆಯಲ್ಲಿ ನುರಿತ ದೈಹಿಕ ಶಿಕ್ಷಕಿಯಿದ್ದು ಇವರ ತರಭೇತಿಯಿಂದ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ಹಾಗೂ ರಾಷ್ಟ್ರೀಯ ದಿನಾಚರಣೆಗಳಲ್ಲಿ ಪಥಸಂಚಲನ, ಬ್ಯಾಂಡ್‌ಸೆಟ್ ಮತ್ತು ಸೇವಾದಳದ ತಂಡಗಳು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಒಟ್ಟಾರೆಯಾಗಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಿದ ದಾನಿಗಳು, ಎಸ್.ಡಿ.ಎಂ.ಸಿ.ಸಮಿತಿಯವರು, ಪೋಷಕರು, ಶಾಲಾ ಸಿಬ್ಬಂದಿ ವರ್ಗದವರು, ಮಕ್ಕಳು, ಅಡಿಗೆ ಸಿಬ್ಬಂದಿಯವರು, ಹಳೆಯ ವಿದ್ಯಾರ್ಥಿ ವೃಂದದವರು ಹಾಗೂ ಹಿತೈಷಿಗಳಿಗೆ ನನ್ನ ಹೃದಯ ಪೂರ್ವಕ ವಂದನೆಗಳನ್ನು ತಿಳಿಸುತ್ತಾ ದಾನದ ರೂಪದಲ್ಲಿ ಸಂಗ್ರಹಿಸಲಾದ ವಸ್ತುಗಳ ಮತ್ತು ದಾನಿಗಳ ವಿವರದ ಪಟ್ಟಿಯನ್ನು ಲಗತ್ತಿಸುವುದರೊಂದಿಗೆ "ಸ್ವಪ್ನದ ನೂರು ಗುಲಾಬಿಗಳಿಗಿಂತ ಸಾಧನೆಯ ಒಂದು ಮುಳ್ಳು ಲೇಸು" ಎಂಬ ಉಕ್ತಿಯನ್ನು ಸ್ಮರಿಸುತ್ತಾ, ನನ್ನ ಅವಧಿಯ ಯಶೋಗಾಥೆಯನ್ನು ಮಂಡಿಸಿದ್ದೇನೆ.

**ದಾನಿಗಳ ಕೊಡುಗೆ**

| ಕ್ರ.ಸಂ. | ವರ್ಷ | ವಸ್ತುವಿನ ಹೆಸರು | ಪ್ರಮಾಣ | ದರ | ಯಾರಿಂದ |
|---|---|---|---|---|---|
| 1 | 2016–17 | ಕಂಪ್ಯೂಟರ್ | 3 | – | Infosys ಕೊಡುಗೆ |
| 2 | 2016–17 | ಸುಪ್ರೀಂ ಪ್ಲಾಸ್ಟಿಕ್ ಕುರ್ಚಿಗಳು | 25 | 13125 | Cantin Home Ltd Bengaluru |
| 3 | 2016–17 | Baby ಪ್ಲಾಸ್ಟಿಕ್ ಕುರ್ಚಿಗಳು | 30 | 6600 | ____"_____ |
| 4 | 2016–17 | 6ಳಿ ಲಾಕರ್ ಅಲ್ಮೇರಾ | 1 | 9500 | ____"_____ |
| 5 | 2016–17 | 6ಳಿ ಲಾಕರ್ ಅಲ್ಮೇರಾ | 1 | 9000 | ____"_____ |
| 6 | 2016–17 | ಅಲ್ಮೇರಾ with glass door | 1 | 10000 | ____"_____ |
| 7 | 2016–17 | ಕಛೇರಿ ಟೇಬಲ್ (2'x4') – drawer | 1 | 5800 | ____"_____ |
| 8 | 2016–17 | ಕಛೇರಿ ಟೇಬಲ್ | 2 | 4000 | ____"_____ |
| 9 | 2016–17 | ಅಕ್ವಾಗಾರ್ಡ್ | 1 | 8990 | ____"_____ |

| | | | | | |
|---|---|---|---|---|---|
| **10** | 2016–17 | ಒಂದು ಶೌಚಾಲಯ ನಿರ್ಮಾಣ | 1 | 65000 | _____”______ |
| | 2016–17 | ಸುವರ್ಣ ಮಹೋತ್ಸವದ ಖರ್ಚು | | 145000 | _____”______ |
| 2017–18ನೇ ಸಾಲು | | | | | |
| 11 | 2017–18 | Amplifier | 1 | 10131 | |
| 12 | 2017–18 | Speaker Box | 2 | 9003 | |
| 13 | 2017–18 | L.R. Mike | 2 | 1921 | |
| 14 | 2017–18 | Mike Stand | 2 | 1712 | |
| 15 | 2017–18 | PROJECTER EPSOW SCREEN | 1 | 31279 | |
| 16 | 2017–18 | UPS Battery | 1 | 13100 | ಹಳೆಯ ವಿದ್ಯಾರ್ಥಿಗಳು |
| 17 | 2017–18 | UPS Charger | 1 | 7109 | ಹಳೆಯ ವಿದ್ಯಾರ್ಥಿಗಳು |
| 18 | 2017–18 | ವಿಜ್ಞಾನ ಉಪಕರಣಗಳು | | 23500 | ಹಳೆಯ ವಿದ್ಯಾರ್ಥಿಗಳು |
| 19 | 2017–18 | ಕ್ರೀಡಾ ಸಾಮಾಗ್ರಿಗಳು | | 25637 | ಹಳೆಯ ವಿದ್ಯಾರ್ಥಿಗಳು |
| *20* | *2017–18* | *15,000 ಲೀ ನೀರಿನ Under ground ತೊಟ್ಟಿ*<br>*೪ ಹೆಚ್.ಪಿ ಪಂಪ್‌ಸೆಟ್*<br>*500 ಲೀ ಸಿಂಟೆಕ್ಸ್* | *1*<br>*1*<br>*1* | *40000* | *ನಗರಸಭೆ ಸಾಗರ* |
| 21 | 2017–18 | 500 ಲೀ ಸಿಂಟೆಕ್ಸ್ | 1 | 4000 | ನಿವೃತ್ತ ನೌಕರರ ಸಂಘದ ಕೊಡುಗೆ |
| 22 | 2017–18 | 700 ಲೀ ಸಿಂಟೆಕ್ಸ್ | 1 | 8000 | ಎ.ಸಿ.ಒ.ವಿಜಯಕುಮಾರ |
| 23 | 2017–18 | ಗ್ರಂಥಾಲಯ ಪುಸ್ತಕಗಳು | | 5000 | ಬಿ.ಎಸ್.ಕವರಿ, ಶಿಕ್ಷಕರು. |

ಶಾಲೆಯ ಮುಂಭಾಗದ ನೋಟ



ಪ್ರೊಜೆಕ್ಟರ್ ಈ ಕಂಪ್ಯೂಟರ್ ಕೊಠಡಿ 2016-17



ಕ್ಷೀರ ಭಾಗ್ಯ ಯೋಜನೆ



ಸುವರ್ಣಮಹೋತ್ಸವ ಉದ್ಘಾಟನಾ ಸಮಾರಂಭ 2016-17





ಶಾಲೆಯಲ್ಲಿ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಸನ್ಮಾನ ಸಮಾರಂಭ 2016-17



ಶೈಕ್ಷಣಿಕ ಪ್ರವಾಸ - ರಾಷ್ಟ್ರಕವಿ ಕುವೆಂಪು - ಕವಿಮನೆ 201



2016-17 Smart class 6th English medium

